ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 6, January-February 2024, Pp.95 - 100
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

ತತ್ವಪದ ಸಾಹಿತ್ಯದಲ್ಲಿ ಆಧುನಿಕತೆಯ ವಿರೋಧದ ನೆಲೆಗಳು

ಡಾ. ಜಾಜಿ ದೇವೇಂದ್ರಪ್ಪ
ಕನ್ನಡ ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗಂಗಾವತಿ.

Abstract:
ಕನ್ನಡ ನೆಲದಲ್ಲಿ ಜನರ ಭಾವನೆಯೊಳಗೆ ಹೊಕ್ಕು ಅಂತರಂಗ ಮತ್ತು ಬಹಿರಂಗ ಶುದ್ಧಿಯನ್ನು ಮಾಡಿದ ಸಾಹಿತ್ಯ ಪ್ರಕಾರಗಳಲ್ಲಿ ತತ್ವಪದಗಳಿಗೆ ಬಹು ಮಹತ್ವವಿದೆ. ಕನ್ನಡದಲ್ಲಿ ವೈಚಾರಿಕತೆಯನ್ನು ಬೋಧಿಸಿದ, ಚಳುವಳಿಯನ್ನು ರೂಪಿಸಿದ, ಜಾತ್ಯಾತೀತ, ಲಿಂಗಾತೀತ ನೆಲೆಯಲ್ಲಿ ಸಮಾಜವನ್ನು ಕಟ್ಟುತ್ತಲೇ ಸಾಹಿತ್ಯ ಸೃಜನಮಾಡಿದ ವಚನ ಸಾಹಿತ್ಯ ಬರೆದ ಶರಣರು ಒಂದು ಚಳವಳಿಯನ್ನೇ ಮಾಡಿದರು. ನಂತರದ ಕಾಲಘಟ್ಟದಲ್ಲಿ ತತ್ವಪದಕಾರರು, ಸೂಫಿಗಳು, ಆರೂಢರು, ಅವಧೂತ ಇತ್ಯಾದಿ ಪಂಥಗಳು ನಿರಂತರ ಶ್ರಮಿಸಿದರು. ಪ್ರಸ್ತುತ ಲೇಖನದಲ್ಲಿ ತತ್ವಪದ ಸಾಹಿತ್ಯದಲ್ಲಿ ಆಧುನಿಕತೆಯ ವಿರೋಧದ ನೆಲೆಗಳನ್ನು ಕುರಿತು ಅಧ್ಯಯನಿಸಲಾಗಿದೆ.

Keywords: *ವಚನ ಸಾಹಿತ್ಯ, ತತ್ವಪದ ಸಾಹಿತ್ಯ, ಆಧುನಿಕತೆ, ಪ್ರತಿರೋಧದ ನೆಲೆಗಳು.*

ಪೀಠಿಕೆ

ಮಧ್ಯಕಾಲೀನ ಭಾರತದಲ್ಲಿ ಸಾಮಾಜಿಕವಾಗಿ ನಡೆದ ಭಕ್ತಿ ಸ್ವರೂಪ ವೈಚಾರಿಕ ಆಕೃತಿಯಾದದ್ದೊಂದು ವಿಶೇಷ. ಅದರಲ್ಲಿಯೂ ಕರ್ನಾಟಕ ಅಂತಹ ಜನಪರ, ಜನಧ್ವನಿಯ ಮುಖ್ಯ ಕೇಂದ್ರವಾಗಿದ್ದಿತು. ಅಂತೆಯೇ 17–18 ನೇ ಶತಮಾನದ ಕಾಲಘಟ್ಟದಲ್ಲಿ ಕರ್ನಾಟಕದ ಕೆಲವು ಭೌಗೋಳಿಕ ವಲಯಗಳಲ್ಲಿ ವಿಚಿತ್ರವಾದ ವಿದ್ಯಮಾನಗಳು ನಡೆದವು. ಆಗತಾನೆ ಈ ನೆಲಕ್ಕೆ ಬ್ರಿಟಿಷರು ಕಾಲಿಟ್ಟಿದ್ದರು. ಅವರ ರಾಜಕೀಯ ಇಚ್ಛಾಶಕ್ತಿ ಹಾಗೂ ಧರ್ಮ ಪ್ರಸಾರದ ಆಕಾಂಕ್ಷೆಗಳು ಎಲ್ಲೆಡೆ ತಲ್ಲಣಗಳನ್ನುಂಟು ಮಾಡಿದ್ದುವು. ದೇಶೀಯವಾದ ರಾಜಮನೆತನಗಳು ತಮ್ಮ ಸರ್ವಾಧಿಕಾರಿ ಧೋರಣೆಯನ್ನು ಬದಿಗಿಟ್ಟು ಬ್ರಿಟಿಷ್ ವಸಾಹತುಶಾಹಿಗಳು ಬೀಸಿದ ಪ್ರಗಾಢವಾದ ರಾಜಕಾರಣದ ಬಲೆಗೆ ಬಿದ್ದರು. ಜೊತೆಗೆ ಅವರನ್ನು ರಾಜಕೀಯವಾಗಿ ಎದುರಿಸಲಾಗದೆ, ಒಪ್ಪಂದಗಳನ್ನು ಮಾಡಿಕೊಂಡು ಒಂದರ್ಥದಲ್ಲಿ ಸೋತುಹೋಗಿದ್ದರು. ಒಗ್ಗಟ್ಟೇಯಿಲ್ಲದ ದೇಶಿಯ ರಾಜಮನೆತನಗಳು. ಅವರ ಒಳಜಗಳಗಳು, ಜಾತಿಯ ಧರ್ಮದ ಸಂಘರ್ಷಗಳ ಕಾರಣದಿಂದ ಒಡೆದು ಚೂರಾದರು. ಈ ಸಮಯದಲ್ಲಿ ಮೈಸೂರು ಭಾಗ ಬ್ರಿಟಿಷ್ ವಸಾಹತು ಸಂಸ್ಕೃತಿಯನ್ನು ಅನುಕರಿಸತೊಡಗಿತು. ಇಂಗ್ಲಿಷ್ ಶಿಕ್ಷಣ ಪಡೆದು ಆಧುನಿಕತೆಯತ್ತ ತಮ್ಮ ಸಾಮಾಜಿಕ, ಸಾಂಸ್ಕೃತಿಕ ಜೀವನವನ್ನು ನಡೆಸತೊಡಗಿದರು. ಅಲ್ಲಿನ ಮೈಸೂರು ಒಡೆಯರು ಆಧುನಿಕ ಶಿಕ್ಷಣ ಪಡೆದು ಹೊಸತಿನ ಕಡೆ ಚಲಿಸಿದರು. ಇದೇ ಸಂದರ್ಭದಲ್ಲಿ ಮೈಸೂರು–ಮಂಗಳೂರು–ಧಾರವಾಡ ಕರ್ನಾಟಕ ಭಾಗಗಳಲ್ಲಿ ಬ್ರಿಟಿಷ್ ಮಿಶನರಿಗಳು

Please cite this article as: ಜಾಜಿ ದೇವೇಂದ್ರಪ್ಪ. (2024). ತತ್ವಪದ ಸಾಹಿತ್ಯದಲ್ಲಿ ಆಧುನಿಕತೆಯ ವಿರೋಧದ ನೆಲೆಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವೆಲಪ್‌ಮೆಂಟ್,* 2(6), 95–100.

ಹೊಸಬಗೆಯ ಶಿಕ್ಷಣ ನೀಡುತ್ತಲೇ ಸಾಹಿತ್ಯ ಪರಿಚಾರಿಕೆಯನ್ನು ಸಂಗ್ರಹ–ಸಂಪಾದನೆ–ಪ್ರಕಟಣೆಯ ಮೂಲಕ ಮಹತ್ತರವಾದ ಕೊಡುಗೆಯನ್ನು ನೀಡಿದರು. ಆ ಕಾಲಘಟ್ಟದಲ್ಲಿ ಇಂಗ್ಲಿಷ್ ಸಾಹಿತ್ಯದ ಪ್ರೇರಣೆಯೂ ಆ ಭಾಗದ ಸಾಂಪ್ರದಾಯಿಕ ಲೇಖಕರ ಮೇಲಾಯಿತು. ಸಹಜವಾಗಿ ಆ ಪ್ರದೇಶಗಳಲ್ಲಿ ಸಾರಿಗೆ–ಶಿಕ್ಷಣ–ಇಂಗ್ಲಿಷ್ ಭಾಷೆ ಪಾಶ್ಚಾತ್ಯ ಸಂಸ್ಕೃತಿಯಿಂದ ಸಾಮಾಜಿಕ ಪಲ್ಲಟವಾಯಿತು. ಒಂದರ್ಥದಲ್ಲಿ ಅಭಿವೃದ್ಧಿಯ ಪಥದಲ್ಲಿ ಜನತೆಯು ಸಾಗುತ್ತಿತ್ತು.

ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿ 17–18 ನೇ ಶತಮಾನದಲ್ಲಿ ಬ್ರಿಟಿಷ್ ವಸಾಹತು ಕಾಲಿಟ್ಟಿತ್ತು. ಆದರೆ ಇದೇ ಕಾಲಘಟ್ಟದಲ್ಲಿ ಇಲ್ಲಿ ರಾಜಕೀಯವಾಗಿ ಆಳವಾಗಿ ನೆಲೆಯೂರಿದ್ದ ಹೈದ್ರಾಬಾದು ನಿಜಾಂ ಪ್ರಭುತ್ವ ಪಾಶ್ಚಾತ್ಯರ ಬೇರುಗಳಿಗೆ ಸೊಪ್ಪು ಹಾಕಲಿಲ್ಲ. ಮುಂದೆ 19 ನೇ ಶತಮಾನ ಹಾಗೂ 20 ನೇ ಶತಮಾನದ ಪೂರ್ವಾರ್ಧದವರೆಗೂ ತಮ್ಮ ಬಿಗಿಯಾದ ರಾಜಕೀಯ ಹಿಡಿತದಿಂದಾಗಿ ಇಂಗ್ಲಿಷ್ ಶಿಕ್ಷಣ, ಮಿಶನರಿಗಳ ಧಾರ್ಮಿಕ ಪ್ರಸಾರಗಳನ್ನು ತಡೆದರು. ಮಾತ್ರವಲ್ಲ ಇಡೀ ದೇಶದಲ್ಲಿ ಆಂಗ್ಲರ ಆಡಳಿತ ಗಾಢವಾಗಿದ್ದಾಗ ಈ ಭಾಗದಲ್ಲಿ ನಿಜಾಂ ಸರಕಾರದ ತೀವ್ರವಾದ ಆಡಳಿತವಿತ್ತು. ಶಿಕ್ಷಣದಲ್ಲಿ ಉರ್ದುಭಾಷೆಯನ್ನು ಕಡ್ಡಾಯಗೊಳಿಸಲಾಗಿತ್ತು. ಆಡಳಿತ ಭಾಷೆಯೂ ಉರ್ದುವೇ ಆಗಿತ್ತು. ಶಾಲಾ–ಕಾಲೇಜುಗಳಲ್ಲಿ ಉರ್ದು ಇತ್ತು. ನಿಜಾಂ ಸರ್ಕಾರದ ಕಾರಣದಿಂದ ಇಲ್ಲಿನ ಸಮುದಾಯಗಳಲ್ಲಿಯೂ ಧಾರ್ಮಿಕ ಸಂಘರ್ಷಗಳು ನಿರಂತರವಾಗಿದ್ದವು. ಎರಡು ಧರ್ಮಗಳ ನಡುವೆ ನಿರಂತರ ತಿಕ್ಕಾಟದಿಂದ ಜನತೆಯು ಸಾಮಾಜಿಕವಾಗಿ ವಿಚಿತ್ರ ಅನುಭವಗಳಲ್ಲಿ ಗೊಂದಲಕ್ಕೆ ಈಡಾಗಿದ್ದರು. ಧಾರ್ಮಿಕ ಕೊಡು–ಪಡೆಯಿಂದಾಗಿಯೂ ಹಿಂದೂ–ಮುಸ್ಲಿಂ ಮತಾಂತರಗಳಾದವು. ನಿಜಾಂ ಕಾಲದಲ್ಲಾದ ರಜಾಕಾರರ ತೀವ್ರ ಹಾವಳಿಯಿಂದಲೂ ಜನತೆಯು ಕಂಗಾಲಾಗಿ ಆರ್ಥಿಕ ದಿವಾಳಿತನ ಅನುಭವಿಸಿದರು. ರಾಜಕೀಯ ಅಸ್ಥಿರತೆಯುಂಟಾಗಿತ್ತು. ಸಾಮಾಜಿಕ ಕ್ಷೋಭೆಗಳೆದುರಾದವು. ಇಂತಹ ಸಂಕೀರ್ಣ ಸಂದರ್ಭದಲ್ಲಿ ಜನರನ್ನು ಸೌಹಾರ್ದ ಜೀವನಕ್ಕೆ ಕರೆತರುವ ಕೆಲಸವನ್ನು ಈ ಭಾಗದ ತತ್ವಪದಕಾರರು, ಸೂಫಿಗಳು, ಆರೂಢರು, ಅವಧೂತ ಇತ್ಯಾದಿ ಪಂಥಗಳು ನಿರಂತರ ಶ್ರಮಿಸಿದರು. ಈ ಸಂದರ್ಭದಲ್ಲಿ ಜನತೆಯು ಧರ್ಮವನ್ನು ನೋಡದೆ ಇಸ್ಲಾಂನ್ನು ಹಿಂದೂ–ಹಿಂದೂವನ್ನು ಇಸ್ಲಾಂ ಏಕೀಭವಿಸಿಕೊಂಡು ದರ್ಗಾ–ದೇವಾಲಯಗಳನ್ನು ಒಂದು ಮಾಡಿಕೊಂಡು ಬದುಕಲೆತ್ನಿಸಿದರು. ಈ ವಿಕ್ಷಿಪ್ತ ಕಾಲಘಟ್ಟದಲ್ಲಿ ಹೈದ್ರಾಬಾದ್ ಕರ್ನಾಟಕದಲ್ಲಿ 300 ಕ್ಕೂ ಹೆಚ್ಚು ತತ್ವಪದಕಾರರು ಸೂಫಿಗಳು ಪದಗಳನ್ನು ಕಟ್ಟಿ ಜನತೆಯ ಮನೋಭೂಮಿಕೆಗೆ ಬಿತ್ತಿದರು. ಈ ಬಿತ್ತುಗಳು ಹೆಚ್ಚಾಗಿ ಆಧ್ಯಾತ್ಮಿಕ–ಧಾರ್ಮಿಕ–ಭಕ್ತಿಯ–ಮುಕ್ತಿಯ ಸ್ವರೂಪವಾಗಿದ್ದವು. ಜನತೆಯನ್ನು ಮತ, ಜಾತಿ, ಧರ್ಮರಾಹಿತ್ಯರನ್ನಾಗಿ ಮಾಡಲು ಭಕ್ತಿಯ ಚೌಕಟ್ಟು ಅನಿವಾರ್ಯವಾಗಿತ್ತು. 17 ರಿಂದ 19 ನೇ ಶತಮಾನದವರೆಗೆ ದಾರ್ಶನಿಕ ಭಕ್ತಿಯ ಸಾಹಿತ್ಯ ಪದ ಸೃಜನವಾಗಿದ್ದರಿಂದ ಇಲ್ಲಿನ ಜನಸಂಸ್ಕೃತಿಗೆ ಬ್ರಿಟಿಷರ ಆಧುನಿಕತೆಯು ಬೇಗ ಒಳದಾರಿಗೆ ಬರಲಾಗಲಿಲ್ಲ. ಆದರೂ 19 ನೇ ಶತಮಾನದ ಉತ್ತರಾರ್ಧ ಮತ್ತು 20 ನೇ ಶತಮಾನದ ಪೂರ್ವಾರ್ಧದಲ್ಲಿ ಹೈದ್ರಾಬಾದ್ ಕರ್ನಾಟಕ ಪರಿಸರದಲ್ಲಿಯೂ ಆಧುನಿಕತೆಯ ಗಾಳಿಯು ಸುಳಿದಾಡಿತು. ಮಾತ್ರವಲ್ಲ ಪ್ರಗಾಢವಾಗುತ್ತಾ ಗ್ರಾಮೀಣ ರೈತರ ಬಳಿ ಸಾರಿತು. ಹಳ್ಳಿಗಾಡಿನ ರೈತಾಪಿಜನ ಮೊಘಲಾಯಿ ಮತ್ತು ನಿಜಾಂನ ರಾಜಕೀಯ ಭಾಗವಾಗಿದ್ದ ರಜಾಕಾರರ ದುರಾಕ್ರಮಣದಿಂದ ದಿವಾಳಿಯಾಗಿ ಆರ್ಥಿಕ ಸಂಕಷ್ಟದಲ್ಲಿದ್ದ ಜನಸಮುದಾಯಗಳಿಗೆ ಬ್ರಿಟಿಷರ ನೂತನ ಜೀವನಶೈಲಿಗಳು ವೆಚ್ಚದಾಯಕವೆನಿಸಿದ್ದವು. ಇದನ್ನು ಸಮದೂಗಿಸಲೆಂದೇ ಆ ಕಾಲದ ತತ್ವಪದಕಾರರು ಆಧುನಿಕತೆಯನ್ನು ಬಹುಶಃ ವಿರೋಧಿಸಿದರು. ಪಾಶ್ಚಾತ್ಯ ಜೀವನ ಶೈಲಿ,

ಆಹಾರಕ್ರಮ, ನಡೆ–ನುಡಿ ಆಚರಣೆಗಳನ್ನು ವಿರೋಧಿಸಿದ ತತ್ವಪದಕಾರರು ಕೆಲವೇ ಜನ. ಇವರು ಬ್ರಿಟಿಷ್ ಪ್ರಭುತ್ವ, ನಿಜಾಂ ಪ್ರಭುತ್ವಗಳನ್ನು ರಾಜಕೀಯವಾಗಿ ನೇರವಾಗಿ ವಿರೋಧಿಸಲಿಲ್ಲ. ಬದಲಾಗಿ ಬ್ರಿಟಿಷ್ ವಸಾಹತು ಕೊಡುಗೆಯಾಗಿ ನೀಡಿದ ಜೀವನಶೈಲಿಗಳನ್ನು ತಿರಸ್ಕರಿಸುವ ಮೂಲಕ ಗ್ರಾಮೀಣ ರೈತಾಪಿ ಜನರಿಗೆ ದುಂದುವೆಚ್ಚ, ಅನಾರೋಗ್ಯಕಾರಕ ಆಹಾರಕ್ರಮಗಳಿಂದ ದೂರವಿರುವಂತೆ ಎಚ್ಚರಿಸುವಲ್ಲಿ ನಿರತರಾದರು.

ತತ್ವಪದಕಾರರಲ್ಲಿ ಆಧುನಿಕತೆಯನ್ನು ಅದರ ಹತಾರಗಳನ್ನು ವಿರೋಧಿಸಿದ ತತ್ವಪದ ಕವಿ ವಡಕಿ ತಾತಪ್ಪಯ್ಯ ಮುಖ್ಯರಾದವರು. ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲ್ಲೂಕಿನ ವಡಕಿಯ ಈ ಅನುಭಾವಿ ಕವಿಯು ಆಗತಾನೆ ಹಳ್ಳಿ ಜಗತ್ತನ್ನು ಪ್ರವೇಶ ಮಾಡಿದ್ದ 'Tea' (ಚಹ) ಒಂದು ವಿಧವಾದ ಆಹಾರಪೇಯ ಕ್ರಾಂತಿಯೆನ್ನಬಹುದು. ಭಾರತೀಯರು ಎಂದೂ ನೋಡದೇ ಇದ್ದ 'ಚಹ' ಮನೆಮಾತಾಯಿತು. ದಿನನಿತ್ಯದ ಜೀವಧಾತುವಿನಂತೆ ಆಕ್ರಮಿಸಿಕೊಂಡಿತು. ಬೀಗರು–ಬಿಜ್ಜರು ಬಂದಾಗ ಸಾಂಪ್ರದಾಯಿಕವಾಗಿ ಶರಭತ್ತು ಪಾನೀಯ ಕೊಡುತ್ತಿದ್ದ ಸಮುದಾಯಗಳು 'ಚಹ' ಕೊಡಲು ಆರಂಭಿಸಿದವು. ಚಹ ಆಧುನಿಕತೆಯ ಸಂಕೇತವಾಯಿತು. ಮಾತ್ರವಲ್ಲ ಆರಂಭದಲ್ಲಿ ಉಳ್ಳವರ ಮನೆಯ ಪೇಯವಾಗಿ, ಪ್ರತಿಷ್ಠೆಯ ಸಂಕೇತವೂ ಆದದ್ದೊಂದು ವಿಸ್ಮಯ. ಅವನ ಮನಿಗೆ ಹೋದ್ರ ಚಹಾಪಾನಿನೂ ಕೊಡಲಿಲ್ಲ.' ಎಂಬ ನಾಣ್ಣುಡಿಯೂ ಜನಜನಿತವಾಯಿತು. ಇಂತಹ ಚಹವನ್ನು ಅಂದಿನ ರೈತಾಪಿ ಜನರು ಬಹುವಾಗಿ ರೂಢಿಸಿಕೊಂಡರೆಂದು ತಿಳಿದು ತತ್ವಪದಕಾರ ಗಡಿ ವಡಕಿ ತಾತಪ್ಪಯ್ಯನವರು–

ಚಹಾ ಕುಡಿಬ್ಯಾಡೋ ಮನುಜಾ
ಛೀ ಮಾಡುವೆ ತಿಳಿತಿಳಿತಿಳಿ
ಚಹಾ ಕುಡಿಬ್ಯಾಡೋ ಮನುಜಾ
ಚಹಾ ಕಾಫೀ ಕುಡಿಬ್ಯಾಡೋ ಮಂಗ
ಚಾಳಿ ಚಟದ ಮನಸಿನ ಮಂಗ
ಛೇ ಇಂದ್ರಿಯ ನಷ್ಟವೇ ಭಂಗ

ಬ್ರಿಟಿಷರಿಗೆ ಪ್ರತಿಷ್ಠೆಯ ಪಾನೀಯವಾಗಿದ್ದ ಚಹ ಕ್ರಮೇಣ ಭಾರತೀಯರ ಜೀವನದ ಭಾಗವಾಯಿತು. ಇದರಿಂದ ಆರೋಗ್ಯನಾಶವೆಂದು ತಿಳಿದ ತಾತಪ್ಪಯ್ಯನವರು ಅದೊಂದು ಚಟವಾಗಿ ಪರಿಣಮಿಸಿ ದೇಹದ ಮೇಲೆ ಬೀರುವ ದುಷ್ಪರಿಣಾಮದ ಬಗೆಗೆ ಅಂದೇ ಎಚ್ಚರಿಸಿದರು. ಅಂತೆಯೇ ಚಹಾ, ಕಾಫಿಯನ್ನು ಹೀನಾಯವಾಗಿ ಬೈಯ್ದಿದ್ದಾರೆ.

ಚಕ್ಕೆಪುಡಿ ನೀರು ಬೆರೆಸಿ
ಸಕ್ರೆಹಾಲು ಅದರೊಳು ಕಲಸಿಟ್ಟಿ
ಕಪ್ಪು ಬಸಿ ಉಪ್ಪಿಟ್ಟು ದೋಸಿ
ಹಚ್ಚೀಡುವುದು ಊರಾಳೂ ಹೇಸಿ.

ಚಹಾವನ್ನು ಊರು ಹಾಳು ಮಾಡುವ ಹೇಸಿಯೆಂದು ನಿಂದಿಸಿದ್ದಾನೆ. ಹಾಗೆಯೇ ನಮ್ಮ ಗ್ರಾಮೀಣ ರೈತಾಪಿ ಜನವರ್ಗ ದೇಸೀ ಊಟವನ್ನು ಬೆಳಗ್ಗೆ ತಿಂದು ಕೃಷಿಕಾಯಕದಲ್ಲಿ ನಿರತರಾಗುತ್ತಿದ್ದರು. ಆಧುನಿಕತೆಯ ಪ್ರಭಾವದಿಂದ ಉಪ್ಪಿಟ್ಟು–ದೋಸೆಯಂತಹ ಲೈಮ್ಲೈಟ್ ಉಪಹಾರಗಳ ದಾಸರಾದ ಸಂದರ್ಭದಲ್ಲಿ ಅವುಗಳನ್ನೂ ಕೂಡ ಊರು ಹಾಳು ಮಾಡುವ ಹೇಸಿ ಎಂದೇ ಕರೆದು ಆ ಪದಾರ್ಥಗಳನ್ನೂ ಜನರಿಂದ ಬಿಡಿಸುವ ಪ್ರಯತ್ನವನ್ನು ತಾತಪ್ಪನವರು ಮಾಡಿದರು. ಚಹಾ ಮತ್ತು ಉಪಹಾರಗಳು ಕೇವಲ ಮನೆಗಳಲ್ಲಿನ ಒಳಾವರಣ ತಿಂಡಿಗಳಾಗಿರದೇ ಹೊರಾವರಣದ ಹೋಟೆಲ್ ತಿಂಡಿಗಳಾಗಿ ಎಲ್ಲಾ ಜನವರ್ಗಗಳಿಗೆ ದೊರೆಯುವಂತಹ ವ್ಯವಸ್ಥೆ ಬಂದುದನ್ನು ಈ ತತ್ವಕವಿ ಟೀಕಿಸಿದ್ದಾನೆ–

ಹೋಟೆಲ್‌ಯೆಂದು ಓಡ್ಯಾಡಿ ಹೊಕ್ಕೀ
ಗಳಿಸಿದ ರೊಕ್ಕ ಅದರೊಳಗಿಕ್ಕೀ
ಹೆಂಡರು ಮಕ್ಕಳು ಮಣ್ಣು ಮುಕ್ಕೀ
ಹೊಲಮನೆ ಕಳಕೊಂಡಾದಿಯೋ ಪಿಕ್ಕೀ ॥

ಹೋಟೆಲ್ ಆ ಕಾಲಘಟ್ಟದಲ್ಲಿ ಒಂದು ಹೊಸ ವಿದ್ಯಮಾನ. ಆಹಾರವನ್ನು ಸಾರ್ವಜನಿಕವಾಗಿ ದೊರೆಯುವಂತೆ ಮಾಡಿದ್ದಲ್ಲದೇ ಪಟ್ಟಣಗಳಲ್ಲಿ ತುಸುವಾದರೂ ಜಾತಿವ್ಯವಸ್ಥೆಯನ್ನು ಮೀರಿ, ಊಟಮಾಡುವ ಪ್ರಯತ್ನದ ಭಾಗವಾಗಿಯೂ ಹೋಟೆಲ್ ಪರಿಕಲ್ಪನೆಯಲ್ಲಿತ್ತು. ಔದ್ಯೋಗಿಕ ಕ್ರಾಂತಿಯ ಫಲವಾಗಿಯೂ ನಗರಕ್ಕೆ ಬರುವ ಜನರ ಹಸಿವನ್ನು, ಹಣ ನೀಡಿ ತುಂಬಿಸಿಕೊಳ್ಳುವ ಕೇಂದ್ರವಾಗಿತ್ತು. ಆರಂಭಕಾಲದಲ್ಲಿ ಇದು ಕೇವಲ 'ಪುರುಷರ ವಲಯ'ವೂ ಆಗಿತ್ತು. ಆದ್ದರಿಂದ ವಡಕಿ ತಾತಪ್ಪಯ್ಯ ಹೇಳುವ 'ಗಳಿಸಿದರೊಕ್ಕ ಅದರೊಳಗಿಕ್ಕೀ, ಹೆಂಡರು ಮಕ್ಕಳು ಮಣ್ಣು ಮುಕ್ಕೀ' ಎಂದು ಒತ್ತಿ ಹೇಳಿದ್ದಾರೆ. ಹೊರತಿಂಡಿ–ಉಪಹಾರಗಳಿಗೆ ದಾಸನಾದ ಮನುಷ್ಯ ಆರ್ಥಿಕ ನಷ್ಟವಾದದ್ದನ್ನು ಹೊಲಮನಿ ಕಳೆದುಕೊಂಡದ್ದನ್ನು ಕವಿ ಕಂಡದ್ದಿದೆ.

ಆಧುನಿಕತೆಯ ಪ್ರಭಾವದಿಂದ ಚಹಾ–ಕಾಫಿ–ಹೋಟೆಲ್‌ಗಳು ಬಂದಾದ ಮೇಲೆ, ಶಿಕ್ಷಣವಂತರ, ಸಿರಿವಂತರ ಮತ್ತೊಂದು ಶೋಕೀ ವಸ್ತು ಸಿಗರೇಟು, ಬೀಡಿಗಳು ಬಂದವು. ದೇಸೀ ಪದ್ಧತಿಯಲ್ಲಿ ಗಾಂಜಾ, ಭಂಗಿ, ತಂಬಾಕುಗಳನ್ನು ಸೇವಿಸುತ್ತಿದ್ದವರು, ಬದಲಾದ ಸಾಮಾಜಿಕ ಸನ್ನಿವೇಶದಲ್ಲಿ ಬೀಡಿ ಸಿಗರೇಟುಗಳು ತಂಬಾಕನ್ನು ಹೂರಣವಾಗಿಟ್ಟುಕೊಂಡೇ ಬ್ರಾಂಡ್‌ಗಳಾಗಿ ಅಂಗಡಿಗಳನ್ನು ಸೇರಿಕೊಂಡು ಮಾರಾಟದ ವಸ್ತುಗಳಾದವು. ಆರಂಭದಲ್ಲಿ ಫ್ಯಾಶನ್ನಿನ ಭಾಗವಾಗಿದ್ದ ಸಿಗರೇಟು–ಬೀಡಿಗಳಿಗೆ ಯುವಸಮಾಜ–ರೈತಾಪಿಜನ ದಾಸರಾದರು. ಅದರಲ್ಲಿಯೂ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ತಂಬಾಕು–ಗಾಂಜಾ–ಸೇವನೆ ಅಧಿಕವಾಯಿತು. ಆರ್ಥಿಕ ವ್ಯಯವೂ, ದುಂದುಗಾರಿಕೆಯೂ, ಆರೋಗ್ಯನಾಶವೂ ಆದದ್ದನ್ನು ಕಂಡ ತಾತಪ್ಪಯ್ಯನವರು–

ಶೀಕ್ರೇಟು ಸೇದಿದರೇಟೂ
ಕೆಮ್ಮುದಮ್ಮು ರಕ್ತದ ಪಾಟೂ
ನಿನ್ನ ದೇಹ ನಿನಗೆ ಚಾಟೂ
ಹಮ್ಮು ಅಹಂಕಾರ ಅಳಿದು ದಾಟು.

ಎಂದು ಹಾಡುವ ಮುಖೇನ ನಾಗರೀಕತೆಯ ಹುಸಿ ಬಡಿವಾರಗಳನ್ನು ತರಾಟೆಗೆ ತೆಗೆದುಕೊಂಡರು. ಆರೋಗ್ಯದ ಕಾಳಜಿಗಾಗಿ ಪದಕಟ್ಟಿ ಪಸರಿಸಿದರು. ಇದನ್ನ ಕೊಪ್ಪಳ–ರಾಯಚೂರು–ಬಳ್ಳಾರಿ ಪರಿಸರದಲ್ಲಿ ಗುಡಿ–ಗುಂಡಾರಗಳಲ್ಲಿ ಜನರು ಭಜನೆಯ ರೂಪದಲ್ಲಿ ಹಾಡಿಕೊಂಡರು. ಆ ಮೂಲಕ ಜನಜಾಗೃತಿಯೂ ಆಯಿತು. ಇಷ್ಟಾದರೂ ಚಟದ ದಾಸರಾದ ಮಂಗಣ್ಣಗಳಿಗೆ ತಾತಪ್ಪಯ್ಯ ಆಧ್ಯಾತ್ಮ ಬೋಧೆ ಮಾಡುತ್ತಾರೆ, ಬೈಯುತ್ತಾರೆ–

ಹಿಂಗ್ಯಾಕೆ ಮಾಡ್ತಿದೆಲೆ ಹುಚ್ಚುಲೌಡಿ
ಹಿಂಗ್ಯಾಕೆ ಮಾಡ್ತಿದೆಲೆ
ನಿನ್ನ ಬುಡ್ಡ ಬುನಾದಿ ಬಲ್ಲೆ
ಆ ಗಂಗ್ಯಾಕೆ ಗಂಗ್ಯಾಲೆ
ನಿನ್ನ ಸಂಗವೇನೆ ಮಂಗನಸೂಳೆ.

ಎಂದು ಛಡಿಯೇಟು ಬಾರಿಸುತ್ತಾರೆ. ಆಧುನಿಕತೆಯ ಅಬ್ಬರಕ್ಕೆ ಮಾರುಹೋದ ಮುಗ್ಧರಿಗೆ ಭಿನ್ನದಾರಿ ತೋರಿಸಿ ಸಂಸಾರವನ್ನು ಹದಕ್ಕೆ ತರಬಯಸಿದ ಅನುಭಾವಿ ತಾತಪ್ಪಯ್ಯ ತಳುಕುಬಳುಕಿನ ಮಾರುಕಟ್ಟೆಯನ್ನು ನಿರಾಕರಿಸಿ, ನಮ್ಮ ಬೆಳೆಗಳ ಪರವಾಗಿ ವಾದ ಮಂಡಿಸುತ್ತಾ ಹೀಗೆ ಹಾಡುತ್ತಾರೆ–

ಗಡಿಬಿಡಿ ಬಂಗಾಲಿ ಸಂತ್ಯಮ್ಮ
ತಂಗಿ ನಿಲ್ಲು ಮಾಡಿ ವ್ಯಾಪಾರಮ್ಮ
ಕಾಯಿಪಲ್ಲೆ ಬಾಯಿರುಚಿ ನೋಡಿರಮ್ಮ
ಬಿಟ್ಟು ಕಡಿಯ ಬಜಾರಕೆ ನಡಿರಮ್ಮ.

ಇದರ ವ್ಯಾವಹಾರಿಕ ಮತ್ತು ಅನುಭಾವಿಕ ನೆಲೆಗಳನ್ನು ಸಮಾಜ ಅರಿತುಕೊಳ್ಳಬೇಕಾಗಿದೆ.

ಕನ್ನಡ ತತ್ವಪದಗಳ ಸಾರ್ವಭೌಮ, ತತ್ವಮೀಮಾಂಸೆಯನ್ನು ಜೀವನ ಮೀಮಾಂಸೆಯನ್ನಾಗಿ ರೂಪಿಸಿದ ಶಿಶುನಾಳ ಶರೀಫರು ಕೂಡ ಆಧುನಿಕತೆಯ ಅಬ್ಬರವನ್ನು ಎರಡು ಬಗೆಯಲ್ಲಿ ನೋಡಿದ್ದಾರೆ. ಆಧುನಿಕತೆಯ ಅಪಾಯವನ್ನು ಯಂತ್ರಸಂಸ್ಕೃತಿಯ ಅನಾಹುತಗಳನ್ನು ವಿಡಂಬನೆ

ಮಾಡಿ ಹಾಡಿದ್ದಾರೆ. ಮತ್ತು ಆಧುನಿಕ ಯಂತ್ರ ಪ್ರೇರೇಪಿತ ಕೆಲಸಗಳು ದೇಸೀಜನರ ದುಡಿವ ಕೈಗಳಿಗೆ ಮಾರಕವೆಂಬುದನ್ನು ಶರೀಫರು ಹೇಳಿದ್ದಾರೆ.

ಗಿರಣಿಯ ವಿಸ್ತಾರ ನೋಡಮ್ಮ ಇದಕ್ಕೆ
ಪರಾಕು ಮಾಡಮ್ಮಾ
ಧರಣಿಪತಿ ಮಹಾರಾಣೀ ದೊರೆಗಳು
ಕರ್ನಾಟಕ ರಾಜ್ಯದಿ
ಮೆರೆಸಿದ ಮಹಾಚೋದ್ಯ ವಿದ್ಯ ಅರಿಯದಾಯಿತು
ನರರಿಗೆಲ್ಲಾ.

ಎಂಬಲ್ಲಿ ಆಧುನಿಕ ಕಾಲಮಾನದಲ್ಲಿ ನಮ್ಮ ನೆಲಕ್ಕೆ ಧಾಳಿಯಿತ್ತ 'ಗಿರಣಿಯ' ಅಥವಾ ಯಂತ್ರಗಳನ್ನು ಜನ ಸ್ವೀಕರಿಸಿದ ಬಗೆಯನ್ನು ಒತ್ತಿಹೇಳಬೇಕಾಗಿದೆ. ಇದಕ್ಕೆ ಪರಾಕು ಮಾಡಮ್ಮ ಎಂಬಲ್ಲಿ ಸೂಕ್ಷ್ಮವಾದ ವಿಡಂಬನೆಯೂ ಇದೆ. ಬ್ರಿಟಿಷ್ ವಸಾಹತು ಸಂದರ್ಭವು ಅಭಿವೃದ್ಧಿಯ ಮುನ್ನೋಟಗಳನ್ನಿಟ್ಟುಕೊಂಡು ತಯಾರಿಸಿದ ತಂತ್ರಜ್ಞಾನದ ಬಗ್ಗೆ ಶರೀಫರಿಗೆ ಖೇದವಿದೆ, ಆಕ್ರೋಶವಿದೆ. ತತ್ವಪದದಲ್ಲಿ ಅವರು ಹೇಳಿರುವುದು ಹೀಗೆ–

ಘೋರವಾಗಿ ಮಹಾ ಮುಂಬೈಯೊಳು
ಏರಿಗಟ್ಟಿ ಯಂತ್ರದ ಗಿರಣಿಗಳು
ಮಾರಿಕಾ ಆಗಿ ಮೈಬಣ್ಣದ ಗುಳ್ಳೆಗಳು
ಕುಳ್ಳ ಜನರು ನಷ್ಟಾದರು ಸಖಿಯೇ

ಎನ್ನುವಲ್ಲಿ ನವನಾಗರಿಕತೆಯ ಅನಾಹುತಗಳ ಮುನ್ನೋಟವನ್ನು ಅಂದೇ ಬರೆದು ಎಚ್ಚರಿಸಿದ್ದಾರೆ. ನಗರೀಕರಣ–ಕಾಂಕ್ರಿಟ್ ಕಾಡು, ತಂತ್ರಜ್ಞಾನ, ಯಂತ್ರ ವ್ಯವಸ್ಥೆಗಳು ಮನುಷ್ಯ ಜೀವನಕ್ಕೆ ಎರವಾಗುತ್ತವೆಂಬುದು ಶರೀಫರ ಬದ್ಧತೆಯ ನಿಲುವು. ಶರೀಫರು ತಮ್ಮ ತತ್ವಪದಗಳಲ್ಲಿ ನೇರವಾಗಿಯೇ ಇಂಗ್ಲೆಂಡಿನ ಮಹಾರಾಣಿಯನ್ನು ತರಾಟೆಗೆ ತೆಗೆದುಕೊಂಡಿದ್ದಾರೆ, ಕಂಪನಿ ಸರಕಾರದಿಂದ ಆಗುವ ಅನಾಹುತಗಳನ್ನು ಎತ್ತಿ ತೋರಿಸಿದ್ದಾರೆ. ಕುಶಾಗ್ರಮತಿ ಇಂಗ್ಲೆಂಡಿನ ಜನರನ್ನೂ ಅಧಿಕಾರಿಗಳನ್ನೂ ಒಂದೆಡೆ ಕೊಂಡಾಡುತ್ತಲೇ ಟೀಕಿಸಿಯೂ ಇದ್ದಾರೆ.

ಹೈದ್ರಾಬಾದ್ ಕರ್ನಾಟಕ ಭಾಗದಲ್ಲಿ ನೂರಾರು ತತ್ವಪದಕಾರರು ಬ್ರಿಟಿಷ್ ಸರಕಾರ ಮತ್ತು ನಿಜಾಂ ಪ್ರಭುತ್ವದ ಆಡಳಿತದ ಸಂದರ್ಭದಲ್ಲಿಯೇ ಜೀವಿಸಿದ್ದವರಿದ್ದಾರೆ. ಆದರೆ ಇವರಲ್ಲಿ ಕೆಲವರು ಮಾತ್ರ ಆಧುನಿಕತೆಯ ಪ್ರಭಾವ ವನ್ನು ಯಂತ್ರನಾಗರೀಕ ಜೀವನದ ಹತಾರಗಳನ್ನು ಹೇಳಲು ಸಾಧ್ಯವಾಯಿತು. ಬ್ರಿಟಿಷ್ ಸರ್ಕಾರದ ಸರ್ವಾಧಿಕಾರತನವನ್ನು ಅನುಭವಿಸಿ, ಹೈದ್ರಾಬಾದ್ ನಿಜಾಂರ ತೀವ್ರ ದುರಾಡಳಿತಕ್ಕೆ ಬಳಲಿ ಬೆಂಡಾಗಿ, ರಜಾಕಾರರ ಆಕ್ರಮಣಕ್ಕೆ ನಲುಗಿ, ಅವರು ಮಾಡಿದ ಸ್ತ್ರೀಯರ ಅತ್ಯಾಚಾರಗಳನ್ನು ಕಂಡೂ ಕೂಡ ನೇರವಾಗಿ ಪ್ರತಿಭಟಿಸಿ, ತತ್ಕಾಲೀನ ಘಟನೆಗಳನ್ನು ಕುರಿತು ಅಷ್ಟಾಗಿ ಪ್ರತಿಕ್ರಿಯೆ ನೀಡಿಲ್ಲ. ಬದಲಾಗಿ ನಲುಗಿಹೋದ ಸಮಾಜವನ್ನು, ಜನತೆಯನ್ನು ಆಧ್ಯಾತ್ಮ ಸಾಧನೆಯ ಕಡೆ ಕೊಂಡೊಯ್ದದ್ದೇ ಹೆಚ್ಚು. ಆದರೂ ಕೆಲವೇ ಜನರು ಅಪರೋಕ್ಷವಾಗಿಯಾದರೂ ಪ್ರತಿಭಟಿಸಿದ್ದಾರೆ. ಅಪಾಯಗಳನ್ನು ಎತ್ತಿತೋರುವ ಪ್ರಯತ್ನ ಮಾಡಿದ್ದಾರೆ. ಹೀಗೆ ಮಾಡಿದವರಲ್ಲಿ ಮಹಾಗಾವದ ಮೀರ್‌ಸಾಬ್‌ರು ಒಬ್ಬರು. ಆಧುನಿಕ ಶೈಲಿಯ ಜೀವನವಿಧಾನವನ್ನು ಕಂಡ ಈ ಕವಿ–

ಹಿಪ್ಪಿಕಟಿಂಗ್ ಕೂದಲಬಿಟ್ಟು
ಬೆಲ್‌ಬಾಟಮ್ ಪ್ಯಾಂಟು ತೊಟ್ಟು
ದಂದಿ ಆಗಲದಕ ಕಳುವಿಗೆ ಹೊಂಟಿ
ಏರಿದ ರೇಲಗಾಡಿ.

ಎಂಬಲ್ಲಿ ಫ್ಯಾಶನ್ ಯುಗದ ನವಯುವಕರ ಕುರಿತು ಈತನಿಗೆ ಒಳಾಕ್ರೋಶವಿದೆ. ಉಡುಗೆ–ತೊಡುಗೆಗಳು ವಿದೇಶಿಗಳಾದದ್ದರ ಬಗೆಗೆ ಅಸಮಾಧಾನವಿದೆ. ಇದೆಲ್ಲ ಫ್ಯಾಶನ್ ಮಾಡಲು ಹಣವಿಲ್ಲದಾಗ ರೈಲುಗಾಡಿ ಹತ್ತಿ ಕಳ್ಳತನ ಮಾಡುವಿರಿ ಎಂಬ ಈ ಮಾತಿನೊಳಗೆ ಸ್ಥಳೀಯ ಬದುಕನ್ನು ಕಳಚಿಕೊಂಡ ಈ ಕಾಲದ ಯುವಜನತೆಯ ನಿರ್ಧಾರಗಳು ಸರಿಯಲ್ಲವೆಂಬ ನಿಲುವು ಈ ಕವಿಯದು.

'ಶಿಲ್ಲಪ್ಪ' ಎಂಬ ಮತ್ತೊಬ್ಬ ತತ್ವಪದಕಾರ ಆಧುನಿಕತೆಯ ಬೆಡಗನ್ನು ಕಂಡು ವಿಮುಖ ಧೋರಣೆಯನ್ನು ವ್ಯಕ್ತಪಡಿಸಿದ್ದಾನೆ. ಇಡೀ ಭಾರತೀಯ ಸಮಾಜವು ಬ್ರಿಟಿಷರ–ವಿದೇಶಿಯರ ಪ್ರಭಾವ–ಪ್ರೇರಣೆಯಿಂದ ಬದಲಾಗುತ್ತಿರುವುದನ್ನು ಕಂಡು ಮಮ್ಮಲ ಮರುಗಿದ್ದಾನೆ. ಕಾಲದ–ಸಂಸ್ಕೃತಿಯ ಯಜಮಾನಿಕೆಯ ಈ ಪ್ರಭಾವ ತುಂಬ ಸಹಜವಾದದ್ದು. ಆದರೂ ವಿಲಾಸಿ ಜೀವನದ ಸಂಗತಿಗಳನ್ನು ಈ ಕವಿಯು–

ಬಟ್ಟೆ ತೊಟ್ಟೇನಿ ಚಷ್ಟರ್ ಮಲ್‌ಮಲ್
ಕೋಟಕಮೀಸ ಮೈಯೊಳಗ
ಸೂಟ್‌ಬೂಟ್ ಪಟ್ಲೋನ ನೆಕ್‌ಟೈ
ಬೆಲ್ಟ್ ಕಟ್ಟಿದೇನಿ ಟೊಂಕಿನಾಗ
..
....
ಹಚ್ಚಿದೆ ನಾನು ಹೀನಾ ಚಮೇಲಿ
ಗುಲಾಬದೆಣ್ಣಿ ಕೂದಲಿಗೆ

ಎಂದು ಬರೆಯುವ ಮೂಲಕ ಆಧುನಿಕ ಕಾಲದ ಪಾಶ್ಚಾತ್ಯ ಅನುಕರಣ ವಿಧಾನದ ನೆಲೆಗಳನ್ನು ಪದಕಟ್ಟಿ ಹಾಡಿದ್ದಾನೆ ಶಿಲ್ಲಪ್ಪ ಕವಿ.

ಹೀಗೆ ಕನ್ನಡ ತತ್ವಪದ ಸಾಹಿತ್ಯದ ಮೂಲಕವೂ ಆಧುನಿಕತೆಗೆ ವಿರೋಧ ಒಡ್ಡಿದ, ವಸಾಹತುಶಾಹಿ ನಿರಾಕರಣೆಯ ಸಂಗತಿಗಳನ್ನು ಗಮನಿಸಬಹುದು. ಸ್ವರೂಪತಃ ತತ್ವಪದಗಳ ಕೇಂದ್ರ ಆಶಯ ಭಕ್ತಿ, ಆಧ್ಯಾತ್ಮ ದರ್ಶನ. ಜಡ–ಜಂಜಡದ ಬದುಕಿಗೆ ಬೆಳಕಿನ ಮಾರ್ಗವನ್ನು ತೋರುವುದು. ಅಲ್ಲದೇ ಸದಾ ಧರ್ಮ–ಜಾತಿ–ವರ್ಗದ ಸಂಕೋಲೆಗಳಲ್ಲಿ ಮುಳುಗಿದ ಜನಸಮುದಾಯಗಳನ್ನು ಮಾನವೀಯ ಅಂತಃಕರಣಕ್ಕೆ ತಂದು ಸಮಸಮಾಜದಲ್ಲಿ ಸಮರಸದಿಂದ ಬದುಕುವಂತೆ ಮಾಡುವುದು. ಬ್ರಿಟಿಷ್ ವಸಾಹತುಶಾಹಿ ಮತ್ತು ಹೈದ್ರಾಬಾದ್ ನಿಜಾಂರ ನಿರಂಕುಶ ಆಡಳಿತಕ್ಕೆ ರೋಸಿಹೋದ ಜನತೆಯನ್ನು ಕಣ್ಣಾರೆ ಕಂಡರೂ ತತ್ವಪದಕಾರರು ಅವುಗಳನ್ನು ಅಧಿಕಾರಸ್ಥರನ್ನು ನೇರವಾಗಿ ಪ್ರತಿಭಟಿಸುವ ಗೋಜಿಗೆ ಹೋಗಿಲ್ಲ. ಆ ಕಾಲದ ಒತ್ತಡಗಳೇನಿತ್ತೋ ಮನಗಾಣಬೇಕಾಗಿದೆ. ಬಹುತೇಕ ಆಧುನಿಕತೆಯನ್ನು ವಿರೋಧಿಸಿದ ಕೆಲವೇ ತತ್ವಪದಗಳಾದರೂ ಅವು ನೇರವಾಗಿ ರಾಜಕೀಯ ಇಚ್ಛಾಶಕ್ತಿಯನ್ನು ಹೊಂದಿ ಬರೆದಂಥವುಗಳಲ್ಲ. ಪ್ರಭುತ್ವವನ್ನೂ ಅವರ ದಬ್ಬಾಳಿಕೆಯನ್ನು ನೇರವಾಗಿ ಎಲ್ಲಿಯೂ ದಾಖಲಿಸುವ ಪ್ರಯತ್ನ ಮಾಡಲಿಲ್ಲ. ಬದಲಾಗಿ ಆಧ್ಯಾತ್ಮಿಕ ಹಾದಿಯಗುಂಟ ಅವರು ನಡೆಯುತ್ತಲೇ ಆಧುನಿಕತೆ ಸ್ಥಿರೀಕರಿಸಿದ ಸಾಮಾಜಿಕ ಆಚರಣಾತ್ಮಕ ಜೀವನ ವಿಧಾನವನ್ನು ವಿರೋಧಿಸಿರುವುದು ಕಂಡುಬರುತ್ತದೆ.

ಪರಾಮರ್ಶನ ಗ್ರಂಥಗಳು

- ಭಾಸ್ಕರ ಟಿ.ಎಂ. (ಸಂ.) (1998). *ಮಹಾಗಾಂವ ಮೀರಸಾಬ.* ಕನ್ನಡ ಸಾಹಿತ್ಯ ಅಕಾಡೆಮಿ.
- ಜಾಜಿ ದೇವೇಂದ್ರಪ್ಪ. (2020). *ತಿಳಿದಷ್ಟೇ ಬಯಲು.* ಮರಡಿಲಿಂಗೇಶ್ವರ ಪ್ರಕಾಶನ.
- ಜಾಜಿ ದೇವೇಂದ್ರಪ್ಪ. (ಸಂ.) (2017). *ಹೊಳಲಗುಂದಿ ಸಾಯಿಬಣ್ಣತಾತನವರ ತತ್ವ ಪದಗಳು.* ರಾಷ್ಟ್ರೀಯ ಸಂತ ಕನಕದಾಸ ಅಧ್ಯಯನ ಮತ್ತು ಸಂಶೋಧನ ಕೇಂದ್ರ.
- ಮಲ್ಲಿಕಾರ್ಜುನ ಶಿ ಲಠ್ಠೆ. (1994). ಕಡಕೋಳ ಮಡಿವಾಳಪ್ಪ. ಕರ್ನಾಟಕ ಸಾಹಿತ್ಯ ಅಕಾಡೆಮಿ.
- ಪ್ರಭು ಖಾನಾಪುರೆ. (1998). *ಮುಸ್ಲಿಂ ತತ್ವಪದಕಾರರು.* ಕನ್ನಡ ಸಾಹಿತ್ಯ ಅಕಾಡೆಮಿ.
- ರಹಮತ್ ತರೀಕೆರೆ. (ಸಂ.) (2017*). ತತ್ವಪದ ಪ್ರವೇಶಿಕೆ – ಸಂಪುಟ 1,* ರಾಷ್ಟ್ರೀಯ ಸಂತ ಕನಕದಾಸ ಅಧ್ಯಯನ ಮತ್ತು ಸಂಶೋಧನ ಕೇಂದ್ರ.